# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 226 ಃ 2012**

ಪಿಡಬ್ಲೂ:5
ಸಿಡ್ಲೂ ಃ 15

| | |
|---|---|
| ಸಾಕ್ಷಿಯ ಹೆಸರು | ಃ ಗಂಗಾಧರಯ್ಯಾ |
| ತಂದೆಯ ಹೆಸರು | ಃ ರುದ್ರಯ್ಯಾ ಮನಕಟ್ಟಿಮಠ |
| ವಯಸ್ಸು | ಃ 49 ವರ್ಷ |
| ಉದ್ಯೋಗ | ಃ ಎಫ್‌ಡಿಸಿ ಎಚ್‌ಡಿಎಮ್‌ಸಿ ಧಾರವಾಡ |
| ವಾಸ ಸ್ಥಳ | ಃ ಧಾರವಾಡ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಿದ ದಿನಾಂಕಃ 27–10–2016

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ನಾನು 1985 ರಲ್ಲಿ ಎಚ್‌ಡಿಎಮ್‌ಸಿ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ಎಸ್‌ಡಿಸಿ ಅಂತಾ ಸೇರಿಕೊಡಿದ್ದೆ. ನಂತರ 1995 ರಲ್ಲಿ ನನ್ನ ನೌಕರಿ ರೆಗುಲರ್ ಆಗಿದ್ದು ನನಗೆ ವಾಟರ್ ಸಪ್ಲೈ ಇಲಾಖೆಯಲ್ಲಿ ನೇಮನೂಕ ಮಾಡಿದ್ದರು. ಅದರಂತೆ ಡಿಸಿ ಆಫೀಸ್ ಹತ್ತಿರ ಇರುವ ವಾಟರ್ ಟ್ಯಾಂಕಿನ ಉಸ್ತುವಾರಿ ನೀಡಿದ್ದು ಆ ಸಂದರ್ಭದಲ್ಲಿ ನೀರಿನ ತೊಂದರೆಯಾದರೆ ದಿನಪತ್ರಿಕೆಯಲ್ಲಿ ಸುದ್ದಿ ನೀಡುವ ಕೆಲಸ ಕೂಡಾ ಮಾಡುತ್ತಿದ್ದೆ . ನನ್ನ ಮೇಲೆ ವರ್ಕ ಇನ್ಸ್‌ಪೆಕ್ಟರ , ಅವರ ಮೇಲೆ ಜೆಇ, ಆ ನಂತರ ಎಇಇ, ಅವರ ಮೇಲೆ ಎಇ ಇದ್ದರು. ಅದರಂತೆ 1 ಮತ್ತು 2ನೇ ಆರೋಪಿತರು ಗೊತ್ತು ಅವರು 1990 ರಲ್ಲಿ ನನ್ನ ಮೇಲಾಧಿಕಾರಿಗಳು ಅಂದರೆ ಎಕ್ಸಿಕುಟಿವ್ ಇಂಜನೀಯರ ಆಗಿದ್ದರು.

2. ಚಾಸಾ–1 ಅವರು ಗೊತ್ತು, ಸದರಿಯವರು 1ನೇ ಆರೋಪಿಯ ಅವಧಿಯ ನಂತರ ಆ ಸ್ಥಾನಕ್ಕೆ ಬಂದರು. ಅವರೂ ಕೂಡಾ ಪಿಡಬ್ಲೂಡಿ ಹಾಗೂ ವಾಟರ್ ಸಪ್ಲೈ ಸಕ್ಷೇನ್‌ನಲ್ಲಿ ಇದ್ದರು. ಪಿಡಬ್ಲೂಡಿಯಲ್ಲಿ ರಸ್ತೆ , ಗಟಾರ ಒಳಚರಂಡಿ ಕಾಮಗಾರಿ ಕುರಿತು ಅವರು ಕರ್ತವ್ಯ ನಿರ್ವಹಿಸುತ್ತಿದ್ದರು. ಅದರಂತೆ ಎಚ್‌ಡಿಎಮ್‌ಸಿ ಇಲಾಖೆಯಲ್ಲಿ ತುಂಡು ಗುತ್ತಿಗೆ ಕಾಮಗಾರಿ ಅಡಿಯಲ್ಲಿ ಅವ್ಯವಹಾರ ಆಗಿದ್ದರ ಕುರಿತು ಪತ್ರಿಕೆಯಲ್ಲಿ ನೋಡಿ ಗೊತ್ತಾಯಿತು. ಅದರ ಗುತ್ತಿಗೆ ಕಾಮಗಾರಿ ಯಾರಿಗೆ ಇತ್ತು

ಎಂಬುದರ ಬಗ್ಗೆ ಮಾಹಿತಿ ಇಲ್ಲ. ಅದನ್ನು ವರ್ಕ ಇನ್ಸಪೆಕ್ಟರ ಜೆಇ, ಎಇಇ ಮತ್ತು ಇಇ ಇವರೆ ನೋಡಿಕೊಳ್ಳುತ್ತಿದ್ದರು. ಅದರಂತೆ 8ನೇ ಆರೋಪಿ ಕುರಿತು ಕೇಳಿರುವುದಿಲ್ಲ . ಅವರ ಪರಿಚಯ ನನಗೆ ಇಲ್ಲ. ಅದರಂತೆ ಈ ಪ್ರಕರಣದಲ್ಲಿ ಯಾರು ಕ್ರಮ ಕೈಗೊಂಡರು ಎಂಬುದರ ಬಗ್ಗೆ ಕೂಡಾ ನನಗೆ ಮಾಹಿತಿ ಇಲ್ಲ. ಆದರೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು.

<u>(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣ'ಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)</u>

<u>ಪಾಟೀ ಸವಾಲು ಎಪಿಪಿಯವರಿಂದ</u>

3. ದಿನಾಂಕಃ 4 10 2000 ರಂದು ಉಪ ನಗರ ಪೊಲೀಸರು ವಿಚಾರಣೆ ಮಾಡಿದಾಗ ಈಗ ಓದಿ ಹೇಳಿದಂತೆ ಅಂದರೆ -------------- ತಿಳಿದುಬಂದಿರುತ್ತದೆ ಅಂತಾ ನಿಶಾನೆ ಪಿ-5 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ವಿಷಯ ನನಗೆ ಮಾಹಿತಿ ಇದ್ದರೂ ಕೂಡಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>

4. 1 ಮತ್ತು 2ನೇ ಆರೋಪಿತರು ಯಾವ್ಯಾವ ವಾರ್ಡಿನಲ್ಲಿ ಯಾವ್ಯಾವ ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ಅದರಂತೆ 1ನೇ ಆರೋಪಿ ಮಾರ್ಚ 31, 2000 ರಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ .

<u>ಮರು ವಿಚಾರಣೆಃ</u> ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.